78

ಅಮೃತವಾಣಿ

(ಲೋಕನಾಯಕರ ವಚನಗಳು)

ಸಂಗ್ರಾಹಕರು:

ಶ್ರೀ| ಎಮ್. ಶ್ರೀಧರ ಕಿಣಿ.

ಬುದ್ಧ ಭಗವಾನ	ಸ್ವಾಮಿ ವಿವೇಕಾನಂದ
ಮಹಾತ್ಮಾ ಯೇಸುಕ್ರಿಸ್ತ	ಸ್ವಾಮಿ ರಾಮತೀರ್ಥ
ಮಹಮ್ಮದ ಪೈಗಂಬರ	ಮಹಾತ್ಮಾ ಗಾಂಧಿ

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ)
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. ಅದ್ಭುತ ತ್ಯಾಗ (ದ್ವಿತಿಯ ಮುದ್ರಣ)
೬. *ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
೮. *ಇಂಗ್ಲಿಷ್–ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. *ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ದ್ವಿತೀಯ ಮುದ್ರಣ)
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ)
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. ಭಾರತದ ಮಹಾನಗರ (ದ್ವಿ. ಮುದ್ರಣ)
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ)
೨೩. ಸೂರ್ಯನ ಸಂಸಾರ
೨೪. ಭಾರತದ ಮಹಾನಗರ (ದ್ವಿ. ಮುದ್ರಣ)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
೨೭. ಹಾಸವಿಲಾಸ (ನಗೆಹನಿಗಳು)
೨೮. *ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಪೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳು
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.
೪೯ ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟಬಿಟ್ಟಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯಮ್
೬೪. ಲೌಕಿಕ ನ್ಯಾಯಗಳು
೬೫. ಶಿಶುಪಾಲ ಮಾನಭಂಗ
೬೬. ಜರಾಸಂಧ ವಧೆ
೬೭. ಜವಾಹರಲಾಲರ ಜೀವನ ಚರಿತ್ರೆ
೬೮. ಕರುಣೆ ಮತ್ತು ಇತರ ಕಥೆಗಳು
೬೯. ಶ್ರೀಕ್ಷೇತ್ರ ಉಡುಪಿ
೭೦. ವಿನೋದ ವಿಹಾರ
೭೧ ಭಾರತದ ಗತವೈಭವ
೭೨. ಸತ್ಯ ಹರಿಶ್ಚಂದ್ರ
೭೩. ಸೂಕ್ತಿಗಳು.
೭೪. ಉ. ಕ. ದ ಯಕ್ಷಗಾನ ಕಲಾವಿದರು
೭೫. ದೇವರ ಸಾಮ್ರಾಜ್ಯದಲ್ಲಿ...
೭೬. ಕ್ರಾಂತಿಕಂಠೀರವ ಭಗತ್ ಸಿಂಘ್
೭೭. ಜಾತಕಪಠನ ಮತ್ತು ಇತರ ಕಥೆಗಳು
೭೮. ಅಮೃತವಾಣಿ

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಅಮೃತವಾಣಿ

---

೧. ಬುದ್ಧಭಗವಾನನ ವಚನಗಳು

೧. ಹಗೆಯಿಂದ ಹಗೆಯು ಎಂದಿಗೂ ತೀರದು. ಪ್ರೀತಿಯಿಂದ ಮಾತ್ರ ಹಗೆಯನ್ನು ಜಯಿಸಬಹುದು. ಇದೇ ಸನಾತನ ಧರ್ಮ.

೨. ಸೋರುವ ಮನೆಯಲ್ಲಿ ಮಳೆ ಬೀಳುವಂತೆ, ಬಿಗಿಹಿಡಿಯದ ಮನಸ್ಸಿನಲ್ಲಿ ಆಶೆಯು ಒಳನುಗ್ಗುವದು.

೩. ಹೂವುಗಳ ಬಣ್ಣ ಮತ್ತು ಗಂಧವನ್ನು ಲೆಕ್ಕಿಸದೆ ತುಂಬಿಯು ಜೇನನ್ನು ಹೀರುವಂತೆ, ಮನಸ್ಸನ್ನು ಇಂದ್ರಿಯಗಳಿಗೆ ಒಳಪಡಿಸದೆ ಜ್ಞಾನ ಸಂಪಾದನೆ ಮಾಡಬೇಕು.

೪. ಆದರ್ಶ (ಸತ್ಕರ್ಮಗಳನ್ನೆಸಗುವ) ಪುರುಷರ ನಡತೆಯನ್ನು ಮುಂದಿಟ್ಟುಕೊಂಡು ಕರ್ತವ್ಯವನ್ನು ಮಾಡುವವನಾಗು. ಸೌರಭವಿಲ್ಲದ ಪುಷ್ಪದಂತೆ, ನುಡಿಯಂತೆ ನಡೆಯಿಲ್ಲದ ಮನುಷ್ಯನ ಸುಭಾಷಿತದಿಂದ ಫಲವೇನು?

೫. ತನ್ನ ಅವಿವೇಕವನ್ನು ತಿಳಿದ ಅವಿವೇಕಿಯು ತಿಳಿದವನು; ಜಾಣನೇ ಸರಿ. ಆದರೆ, ಜಾಣನೆಂದು ಭಾವಿಸುವ ಅವಿವೇಕಿಯು ದಿಟವಾಗಿಯೂ ಮೂರ್ಖನೇ ಸರಿ.

೬. ಹೆಪ್ಪು ಹಾಕುತ್ತಲೇ ಹಾಲು ಮೊಸರಾಗುವಂತೆ, ಪಾಪಕೃತ್ಯದ ಫಲವು ಕೂಡಲೇ ಕಾಣಲಾರದು. ಬೂದಿ ಮುಚ್ಚಿದ ಬೆಂಕಿಯಂತೆ ಅದು ನಿಧಾನವಾಗಿ ಪ್ರಜ್ವಲಿಸಿ, ಪಾಪಿಯನ್ನೂ ಮುಚ್ಚುವುದು (ದಹಿಸುವುದು.)

೭. ನಿನ್ನ ಕುಂದುಕೊರತೆ ತೋರಿಸುವವನು ನಿನಗೆ ಒಂದು ನಿಧಿ ತೋರಿಸುವವನು ಎಂದು ತಿಳಿ.

೮ ದುಷ್ಟರ ಜತೆಯಲ್ಲಿರಬೇಡ. ನೀಚರ ಸಂಗಡಿಗನಾಗಬೇಡ. ನಿನ್ನ ಒಳಿತನ್ನು ಚಿಂತಿಸುವವರ ಮತ್ತು ಉತ್ತಮರ ಸ್ನೇಹವನ್ನೆ ಗಳಿಸು.

೯. ಯುದ್ಧಗಳನ್ನು ಗೆದ್ದವನಿಗಿಂತ ತನ್ನಲ್ಲಿನ ಷಡ್ವೈರಿಗಳನ್ನು ಗೆದ್ದವನೇ ಬಲಾಢ್ಯನಾಗಿರುವನು.

೧೦. ಸೋಮಾರಿ ಅಥವಾ ನಿರ್ವೀರ್ಯನ ನೂರಾರು ವರುಷಗಳ ಆಯುಷ್ಯಕ್ಕಿಂತ, ಓಜಸ್ವಿ ದೃಢ ಉದ್ಯೋಗಿಯಾದವನ ಒಂದು ದಿನದ ಜೀವನವೇ ಮೇಲು.

೧೧ ಪಾಪಕೃತ್ಯವು, ಮಾಗಿಯುವ ತನಕ ಸುಖವಾಗಿ ಕಂಡರೂ ಪರಿಣಾಮವು ದುಃಖಕರ. ಸುಕೃತ್ಯವು ಪ್ರಾರಂಭದಲ್ಲಿ ಕಷ್ಟತರವಾದರೂ ಪರಿಣಾಮದಲ್ಲಿ ಸುಖಕಾರಕ.

೧೨ ನಿನಗೆ ಬೇಡವಾದುದನ್ನು ಪರರಿಗೆ ಮಾಡಬೇಡ. ಪರರನ್ನು ನಿನ್ನಂತೇ ಭಾವಿಸು.

೧೩. ಪರರಿಗೆ ಕೊಡುವ ಕಷ್ಟವು, ಗಾಳಿಯೆದುರಿಗೆ ಬೀಸಿದ ಧೂಳಿಯು ಕಣ್ಣುಗಳನ್ನು ಹೊಕ್ಕುವಂತೆ, ತನ್ನನ್ನೆ ಕೆಡಿಸುವದು.

೧೪. ತನ್ನ ಯೌವನದಲ್ಲಿ ಬ್ರಹ್ಮಚರ್ಯವನ್ನು ಪಾಲಿಸದವನು, ಮೀನಿಲ್ಲದ ಕೊಳವನ್ನು ಕಾಯುವ ಮುದಿಕೊಕ್ಕರೆಯಂತೆ, ಮುದಿತನದಲ್ಲಿ ದುಃಖದಿಂದ ಸಾಯಬೇಕಾಗುವುದು.

೧೫. ದುಷ್ಕೃತ್ಯ ಮಾಡುವುದು ಸುಲಭ; ಸತ್ಕರ್ಮಕ್ಕೆ ಶ್ರಮ ಬಹಳ. ಕೋಪಿಸುವುದು ಸುಲಭ; ಉಲ್ಲಾಸದಿಂದಿರುವುದು ಶ್ರಮಸಾಧ್ಯ.

೧೬. ಅತಿಯಾಸೆಗಿಂತ ದೊಡ್ಡ ಬೆಂಕಿ ಇಲ್ಲ. ದ್ವೇಷಕ್ಕೆ ಸರಿಯಾದ ಹಾನಿ ಇಲ್ಲ. ಹೀನ ಬಾಳುವೆಗಿಂತ ಬೇರೆ ದುಃಖವಿಲ್ಲ. ಶಾಂತಿಗಿಂತ ಬೇರೆ ಸುಖವಿಲ್ಲ.

೧೭. ಹಿಂಸಿಸಬೇಡ. ಧರ್ಮದಲ್ಲಿ ನಡೆ. ಆಹಾರದಲ್ಲಿ ಮಿತಿಯಿರಲಿ. ನಿನ್ನ ಇರುವಿಕೆ ಏಕಾಂತವಾಗಿರಲಿ. ಉತ್ತಮವಾದ ಆಲೋಚನೆಗಳನ್ನೇ ಮಾಡು. ಶತ್ರುಗಳನ್ನು ಪ್ರೀತಿಸು.

೧೮. ತಾಳ್ಮೆಯಿಂದ ಕ್ರೋಧವನ್ನು ಜಯಿಸಿ; ತ್ಯಾಗದಿಂದ ಆಸೆಯನ್ನು ಜಯಿಸು; ದಾನಿಯಾಗಿ ಕೃಪಣತ್ವ ಜಯಿಸು; ಸತ್ಯದಿಂದ ಅಸತ್ಯವನ್ನು ಜಯಿಸು. ವಿನಯದಿಂದ ಅಹಂಕಾರವನ್ನು ಜಯಿಸು.

೧೯. ಪರರ ದುಃಖದಿಂದ ಸುಖಪಡುವವನು ವೈರತ್ವದಿಂದ ನಾಶವಾಗುವನು.

೨೦. ಯಾವ ಪ್ರಾಣಿಯನ್ನೂ ಹಿಂಸಿಸದೆ, ಕಷ್ಟ ಕ್ಲೇಶಕೊಡದೆ, ಸ್ವಾತಂತ್ರ್ಯ ಕಿತ್ತುಕೊಳ್ಳದೆ ಇರುವ ಗುಣಿಯೇ ಬ್ರಾಹ್ಮಣನು—ಮತ್ತು ಜ್ಞಾನಿಯಾಗಿದ್ದಾನೆ.

೨೧. ತನ್ನನ್ನು ಕಷ್ಟಕ್ಕೊಳಪಡಿಸುವವರಲ್ಲಿ ತಾಳ್ಮೆ, ತನ್ನನ್ನು ಹಿಂಸಿಸುವವರಲ್ಲಿ ಶಾಂತ ಗುಣ, ಲೋಭಿಗಳಲ್ಲಿಯೂ ದಾನಿಗಳಲ್ಲಿಯೂ ತ್ಯಾಗ-ಸಮತ್ವ—ಇರುವವನೇ ಬ್ರಾಹ್ಮಣನು.

೨೨. ಭಾಗ್ಯಗಳಲ್ಲಿ ಆರೋಗ್ಯ ಭಾಗ್ಯವೇ ಉತ್ತಮ. ತೃಪ್ತಿಯೇ ಐಶ್ವರ್ಯಗಳಲ್ಲಿ ಉತ್ತಮ. ನಂಬಿಕೆಯೇ ಶ್ರೇಷ್ಠಬಂಧು. ನಿರ್ವಾಣ (ಮೋಕ್ಷ)ವೇ ಎಲ್ಲಕ್ಕಿಂತಲೂ ಉತ್ತಮ.

೨೩. ಏಕಾಂತವಾಸವೂ, ಮನ-ಇಂದ್ರಿಯಗಳ ಸ್ವಾಧೀನತೆಯೂ, ವೇದಾಭ್ಯಾಸ ಗುಣವೂ ಇರುವವನಿಗೆ ಪಾಪವಾಗಲಿ ಭಯವಾಗಲಿ ಇರುವುದಿಲ್ಲ.

೨೪. ಯೋಚಿಸಿ ಮಾತನಾಡು. ಮನಸ್ಸನ್ನು ತಡೆದು ಹಿಡಿ ಮನಸಾ ಕಾಯಾ ದುಷ್ಕೃತ್ಯ ಮಾಡದಿರು.

೨೫. ಮರಣವು ಸನ್ನಿಹಿತವಾದಾಗ ಯಾವ ಬಾಂಧವ್ಯವೂ ಸಹಾಯವಾಗುವುದಿಲ್ಲ. ಇದನ್ನು ತಿಳಿದು ವರ್ತಿಸು. ಸತ್ಕೃತಿಗಳೇ ಸದಾ ಸಹಾಯಕ.

೨೬. ಸಮನ್ವಿತನು ಎಲ್ಲೆಲ್ಲಿಯೂ ಪೂಜ್ಯನು; ಎಲ್ಲಿಯೂ ವಾಸಿಸಲು ಯೋಗ್ಯನು.

೨೭. ಮುಕ್ತಿಯು ಒಂಟಿಯಾಗಿರುವುದು. ತನ್ನನ್ನು ತಾನು ತಿದ್ದಿಕೊಳ್ಳುವುದರಿಂದಲೇ ಇದು ಸಿದ್ಧಿಸುವುದು.

೨. ಮಹಾತ್ಮ ಯೇಸುಕ್ರಿಸ್ತನ ವಚನಗಳು

೧. ಅಹಂಕಾರ ಬಿಟ್ಟು ದೀನ ಹೃದಯದಿಂದಲೂ ದಾಸ್ಯಭಾವದಿಂದಲೂ ಯಾರು ಭಗವಂತನನ್ನು ಸೇವಿಸುತ್ತಾರೋ ಅವರೇ ಧನ್ಯರು.

೨. ತನ್ನಲ್ಲಿರುವ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ಅದರ ಪರಿಹಾರಕ್ಕೆ ಯತ್ನಿಸುವವರೇ ಧನ್ಯರು.

೩. ಯಾರು ವಿನಯಶೀಲರೂ ಸಾಧುಸ್ವಭಾವದವರೂ ಆಗಿರುವರೋ ಅವರೇ ಧನ್ಯರು.

೪. ಉಪ್ಪಿನ ರಸವು ಸರ್ವ ವಸ್ತುಗಳಿಗಿಂತಲೂ ರುಚಿಕರವೂ ಪ್ರಿಯವೂ ಆಗಿರುವಂತೆ ನೀವೂ ಸರ್ವರಿಗೂ ಪ್ರಿಯರಾಗಿ ಬಾಳಿರಿ.

೫. ನಿನ್ನ ನೆರೆಕರೆಯವರನ್ನು ನಿನ್ನಂತೇ ಪ್ರೀತಿಸು. ನಿನಗೆ ಬೇಕಾಗಿದ್ದುದೇ ಇತರರಿಗೂ ಬೇಕಾದೀತೆಂಬ ಭಾವನೆಯಿಂದಿರು.

೬. ನಿಮ್ಮ ಕಣ್ಣುಗಳು ಪಾಪಕಾರ್ಯಕ್ಕೆ ಹೋಗುವದಿದ್ದರೆ ಅವನ್ನು ಕಿತ್ತೊಗೆಯಿರಿ.

೭. ಮಾನವ ಸೇವೆಯೇ ಮಹಾಪೂಜೆ.

೮. ಬೇಡುವವರಿಗೆ ದಾನಮಾಡು. ಕಸಿದುಕೊಳ್ಳುವವನಿಂದ ಹಿಂದಕ್ಕೆ ಕೇಳಬೇಡ.

೯. ತಪ್ಪುಗಳನ್ನು ಹುಡುಕದೆ ಅಪರಾಧಿಯನ್ನು ಕ್ಷಮಿಸು.

೧೦. ಒಳ್ಳೇ ಮರದಿಂದ ಕೆಟ್ಟ ಫಲವಿಲ್ಲ.

೧೧. ಹೃದಯದಲ್ಲಿರುವದೇ ಬಾಯಿಯಿಂದ ಸೋರುವುದು.

೧೨. ಐಶ್ವರ್ಯ, ರೂಪ, ಯೌವನ, ಅಧಿಕಾರ ಮದಾಂಧತೆಗಳಿಂದ ಸ್ವರ್ಗಸುಖಶಾಂತಿಯನ್ನು ಬಯಸುವುದೆಂದರೆ, ಸೂಜಿಯ ತೂತಿನಿಂದ ಒಂಟೆಯು ಹಾಯುವಂತೆ.

೧೩. ಸತ್ಯ ಮತ್ತು ಸಂಪತ್ತು ಏಕತ್ರವಾಗಿರುವುದು ಅಸಾಧ್ಯ. ಹಗೆಯು ಎಲ್ಲಿ ಕಾಣಲ್ಪಡುವುದೊ ಆ ಸ್ಥಳವು ಪವಿತ್ರವೆಂದೆಣಿಸು. ಸಂಪತ್ತು ತ್ಯಜಿಸಿದರೂ ಸತ್ಯವನ್ನು ತ್ಯಜಿಸಬೇಡ.

೧೪. ಬಡವರ ದಾನವೇ ಮಹತ್ವದ್ದೆಂದು ತಿಳಿಯಬೇಕು.

೧೫. ಬಾಲಕರಂತೆ, ನಿರ್ದೋಷಿಗಳೆ ಮೋಕ್ಷಕ್ಕೆ ಅರ್ಹರು. ಮೂಢಾತ್ಮರ ತಪ್ಪಿತವು ಕ್ಷಮೆಗೆ ಪಾತ್ರವಾಗಿದೆ. ಏಕೆಂದರೆ, ಅವರ ಜ್ಞಾನಹೀನತೆಯೇ ಅವರ ತಪ್ಪುಗಳಿಗೆ ಕಾರಣವಾಗಿದೆ.

೩. ಪ್ರವಾದಿ ಮುಹಮ್ಮದ್ ಪೈಗಂಬರರ ವಚನಗಳು

೧. ದೇವರನ್ನು ಹೇಗೆ ತಿಳಿಯಬಹುದೆಂದೂ ಆತನನ್ನು ಸೇವಿಸುವ ಮಾರ್ಗವು ಯಾವುದೆಂದೂ ಚಿಂತಿಸಬೇಡ. ಆತನ ಸೇವಕರಲ್ಲಿ ಯಾರಾದರೂ ರೋಗ ಮತ್ತು ದಾರಿದ್ರ್ಯದಿಂದ ವ್ಯಥೆಪಡುತ್ತಿದ್ದರೆ, ಅವರನ್ನು ಉಪಚರಿಸು. ಅದರಿಂದಲೇ ದೇವರನ್ನೂ ಉಪಚರಿಸಿದಂತಾಗುವುದು.

೨. ಸರ್ವೇಶ್ವರನಾದ ದೇವರಿಗೆ ಆಹಾರ ಸಮರ್ಪಿಸುವುದು ಹೇಗೆಂತ ಯೋಚಿಸಬೇಡ. ನೀನು ಆಹಾರ ಕೊಡಬೇಕೆಂದು ಬೇಡುವ ಭಗವಂತನ ಮಕ್ಕಳೇ ಆದ ಮನುಷ್ಯರಲ್ಲಿ, ಹಸಿದಿರುವವರಿಗೆ ಅನ್ನ ನೀರುಗಳನ್ನು ಕೊಡು. ಅದುವೇ ದೇವರಿಗೆ ಅನ್ನ ನೀರುಗಳನ್ನು ಅರ್ಪಿಸಿದಂತಾಗುವುದು.

೩. ಜಗತ್ತಿನಲ್ಲಿ ಮಾನವರ ಮೇಲೆ ದಯೆ ತೋರಿಸದವನ ವಿಷಯ ಜಗದೀಶ್ವರನಾದರೂ ದಯೆ ತೋರಿಸಲಾರನು. ನೀವೆಲ್ಲರೂ ಬಂಧುಗಳು; ಎಲ್ಲರೂ ಸಮಾನರು; ಜೀವ-ಆಸ್ತಿಗಳು ಪವಿತ್ರವಾಗಿವೆ. ಒಬ್ಬರು ಇನ್ನೊಬ್ಬರ ಜೀವ ಮತ್ತು ವಿತ್ತದ ಮೇಲೆ ಏರಿಹೋಗಬಾರದು. ಎಲ್ಲ ಜಾತಿಭೇದ, ವರ್ಣಭೇದ, ಧರ್ಮಭೇದ, ಜನಾಂಗಭೇದಗಳನ್ನು ಅಡಿಗೊತ್ತಿರಿ.

೪. ಸೃಷ್ಟಿಯೆಲ್ಲ ಭಗವಂತನ ಕುಟುಂಬವೇ ಆಗಿದೆ. ಕುಟುಂಬದ ವಿಷಯ ಆತನು ಮಹಾ ದಯಾಳುವಾಗಿದ್ದಾನೆ. ಪ್ರಾಣಿವರ್ಗಕ್ಕೆ ಯಾವನು ಮೇಲನ್ನುಂಟುಮಾಡುವನೋ ಅವನು ಭಗವಾನನ ಪ್ರೀತಿಗೆ ಪಾತ್ರನಾಗುತ್ತಾನೆ. ಹೆಂಗುಸರು,–ತಾಯಂದಿರು, ಅಕ್ಕ-ತಂಗಿಯಂದಿರು ಮತ್ತು ಅತ್ತೆಗಳು ಆಗಿರುವರು.—ಈ ರೀತಿ ಆಚರಣೆಗೆ ದೇವರ ಆಜ್ಞೆಯಿದೆ.

೫. ತನ್ನ ಸ್ವಂತ ದೇಹವನ್ನು ಪ್ರೀತಿಸುವಂತೆಯೇ ತನ್ನ ಸಹೋದರರನ್ನೂ ನೆರೆಕೆರೆಯವರನ್ನೂ ಪ್ರೀತಿಸಿದ್ದಲ್ಲದೆ ಯಾರೊಬ್ಬನೂ ಭಕ್ತನೆನಿಸಲಾರನು.

೬. ಅತಿ ಕೃಪಣನಾಗಬೇಡ; ಮತ್ತೊಬ್ಬರ ಅಂತರಂಗವನ್ನು ಕಿವಿಗೊಟ್ಟು ಕೇಳಬೇಡ; ತರ್ಕ ಮಾಡಬೇಡ. ಯಾರ ವಿಷಯವೂ ಅಸೂಯೆ ಪಡಬೇಡ; ಯಾರಿಗೂ ಸಂದೇಹವುಂಟು ಮಾಡಬೇಡ. ದೇವರ ಮಕ್ಕಳಾದ ನಾವೆಲ್ಲರೂ ಅನ್ಯೋನ್ಯದಿಂದಿರುವಾ.

೭. ನಿನ್ನ ಸಹೋದರ ಯಾ ನೆರೆಕರೆಯವನಿಗೊಬ್ಬನಿಗಾದರೂ ನೀನು ಸಹಾಯಮಾಡಲು ಸಿದ್ಧನಾದಿಯೆಂದರೆ ನಿನಗೆ ಸಹಾಯಮಾಡಲು ದೇವರು ಸಿದ್ಧನಾಗುವನು.

....

೪. ಸ್ವಾಮಿ ವಿವೇಕಾನಂದರ ವಚನಗಳು

೧. ಬಡವರ ಕಷ್ಟಗಳಿಗೆ ಮರುಗುವವನೇ ಮಹಾತ್ಮನು. ಪುನಃ ಪುನಃ ಜನ್ಮ ತಾಳುವುದಾದರೆ ಸಾವಿರಾರು ಕಷ್ಟಗಳಿಗೊಳಗಾದರೂ ಎಲ್ಲ ದುಃಖಿತ ದರಿದ್ರ ಜನಾಂಗದ ಸೇವೆ ಮಾಡುವುದೇ ನನ್ನ ಧ್ಯೇಯವಾಗಿರಲಿ. ನನ್ನ ಕಷ್ಟದ ತಪಸ್ಸಿನಿಂದ ನಾನು ತಿಳಿದಿರುವ ಸತ್ಯವು ಇದೇ ಆಗಿದೆ. ಪ್ರತಿ ಜೀವಕೋಟಿಯಲ್ಲಿರುವ ಆತ್ಮವೇ ದೇವರು. ಅದರ ಹೊರತು ಬೇರೆ ದೇವರಿಲ್ಲ. ಸಮಸ್ತ ಜೀವಿಗಳ ಸೇವೆಯೇ ದೇವರ ಸೇವೆ. ದೀನ ದರಿದ್ರರ ಪೂಜೆಯೇ ನಾರಾಯಣನ ಪೂಜೆ. ಅದನ್ನು ಗೃಹಸ್ಥ–ಸನ್ಯಾಸವೆಂಬ ಭೇದವಿಲ್ಲದೆ ಸಕಲರೂ ಮಾಡತಕ್ಕದ್ದಾಗಿದೆ.

೨. ಸನಾತನ ಧರ್ಮವು ಎಲ್ಲ ಧರ್ಮಗಳ ಮಾತೃಸ್ಥಾನದಲ್ಲಿರುವುದೇ ಅದರ ವೈಶಿಷ್ಟ್ಯ.

೩. ಜ್ಞಾನಸಿದ್ಧಿಯು ಸತತ ಗ್ರಂಥವಾಚನ, ಸದ್ಗುರು ಉಪದೇಶ, ದೇಶಪರ್ಯಟನೆಯಿಂದ ಸಾಧ್ಯವಿದೆ.

೪. ಮನುಷ್ಯನಿಗೂ ಇತರ ಪ್ರಾಣಿಗೂ ಇರುವ ಭೇದವೆಂದರೆ ಮನುಷ್ಯನು ಬುದ್ಧಿಜೀವಿಯು; ಅಂತಃಜ್ಞಾನಿಯು; ಪ್ರಗತಿಪರನು; ಅವ್ಯಕ್ತದ ಆಶ್ರಿತನು; ಸಂಯಮಿಯು. ಇತರ ಪ್ರಾಣಿಗಳಲ್ಲಿ ಆ ಗುಣಗಳಿಲ್ಲ. ಈ ಗುಣಗಳಿಲ್ಲದ ಮನುಷ್ಯನು ಮೃಗಸಮಾನನಾಗಿದ್ದಾನೆ.

೫. ತಾನು ತನ್ನನ್ನು ಸುಧಾರಿಸಿಕೊಳ್ಳುವುದರಿಂದ (ಶೀಲಗುಣದಿಂದ) ಕುಟುಂಬ, ಸಮಾಜ, ಮತ್ತು ದೇಶವನ್ನು ಸುಧಾರಿಸುವಷ್ಟು ಸಮರ್ಥನಾಗುವನು.

೬. ವಿಶ್ವಬಂಧುತ್ವವನ್ನು ಸಾಧಿಸುವ ನೀತಿಯೇ ಧರ್ಮವೆಂದೆಣಿಸಬೇಕು. ಅದನ್ನು ಸಾಧಿಸದ ಧರ್ಮವಾಗಲಿ ನೀತಿಯಾಗಲಿ ಸ್ವಾರ್ಥಪರವೂ ಅಹಂಭಾವವುಳ್ಳದೂ ಆಗಿದೆ.

೭. ತ್ಯಾಗದಿಂದ ವಿನಹಾ ಧನ-ಮಾನ-ಸಂತತಿಯಿಂದ ಸಂತುಷ್ಟಿ ಸಿಗುವಂತಿಲ್ಲ.

೮. ಪಾಶ್ಚಿಮಾತ್ಯರು ನಿಜಕ್ರೈಸ್ತ ಅನುಯಾಯಿಗಳಾಗಿಯೂ, ಪೌರ್ವಾತ್ಯರು ನಿಜ ವೇದಾಂತಿಗಳಾಗಿಯೂ, ಮುಸ್ಲಿಮರು ನಿಜ ಕುರಾನ ಅನುಯಾಯಿಗಳೂ ಇರುತಿದ್ದರೆ, ಲೋಕವು ಸ್ವರ್ಗವಾಗಿ ಪರಿಣಮಿಸ ಬಹುದು.

೯. ಮಾತೃಪದ ಪಡೆಯುವ ಹೆಣ್ಣುಮಕ್ಕಳನ್ನು ವಿದ್ಯಾವಂತರ ನ್ನಾಗಿ ಮಾಡುವುದರಿಂದಲೇ ಬಹು ಬೇಗ ಜ್ಞಾನ ವಿಸ್ತಾರವೂ ಉತ್ತಮ ಸಂತತಿಯೂ ಉಂಟಾಗುತ್ತದೆ. (ಹೆಣ್ಣುಮಕ್ಕಳ ಶಿಕ್ಷಣವೆಂದರೆ: ಧರ್ಮ, ಸ್ವಾವಲಂಬನ, ಅರ್ಥಸಾಧನ ಜ್ಞಾನ, ವಿಜ್ಞಾನ, ಗೃಹಕೃತ್ಯ, ಆರೋಗ್ಯ, ಶಿಶುಸಂಗೋಪನ, ದೇಶಸೇವೆ, ಇತ್ಯಾದಿ)

೧೦. ನಿಂದೆ, ಸ್ತುತಿ, ಧನ, ಪರಸಹಾಯ, ಜೀವನ—ಮರಣ, ಇವು ಗಳ ಕಡೆಗೆ ಲಕ್ಷ್ಯಕೊಡದೆ ನೀತಿಮಾರ್ಗವನ್ನವಲಂಬಿಸಿ, ನಡೆಯುವುದೇ ಧೀರತನ. ಅದೇ ಕಾರ್ಯದ ಸಾಧನೆ ವ ಪೂರ್ಣತೆ.

೧೧. ಆನೆಗೆ ನಾಯಿಯ ಬೊಗಳಾಟದಿಂದ ತೊಂದರೆ ಇಲ್ಲದಂತೆ, ಸಾಧುವಿಗೆ ಪ್ರಪಂಚವೇ ವಿರೋಧಿಸಿದರೂ ಯಾವ ಕೊರತೆಯೂ ಇರುವು ದಿಲ್ಲ.

೧೨. ಮೃಗ-ಮನುಷ್ಯನ ಭೇದವೆಂದರೆ, ಮನುಷ್ಯನು ಮನೋಬಲ ಪಡೆದು ದಯಾವಂತನಾಗುವುದರಿಂದ ಮಹಾತ್ಮನಾಗುವಂತೆ, ಮೃಗವು ಕ್ರೂರತ್ವ ಮತ್ತು ಬಲ ಹೆಚ್ಚಿದಂತೆ ಮೃಗರಾಜವಾಗುತ್ತದೆ. (ಸಿಂಹ.)

೧೩. ಕನಿಷ್ಠ ಅಥವಾ ಅಸ್ಪೃಶ್ಯವೆಂದೆಣಿಸುವ ಜನಾಂಗದ ಮೇಲಿನ ವಿರೋಧವು ಧರ್ಮದ ಆಧಾರವುಳ್ಳದಲ್ಲ. ಅದು ವ್ಯಕ್ತಿಸಮಾಜದ ಸಂಕೋಚ ದೃಷ್ಟಿಯಿಂದ; ಅದರಿಂದ ಮನುಷ್ಯತ್ವಕ್ಕೇ ಕೀಳ್ತನ.

೧೪. ಮನುಷ್ಯರಿಂದ ತಿರಸ್ಕರಿಸಲ್ಪಟ್ಟವರು ಪರಮಾತ್ಮನಿಂದ ಪುರ ಸ್ಕರಿಸಲ್ಪಡುತ್ತಾರೆ.

೧೫. ಜ್ಞಾನವೃದ್ಧರ ಅನುಭವಗಳನ್ನೂ ಅಭಿಪ್ರಾಯಗಳನ್ನೂ ನವ ಯುವಕರು ಆಜ್ಞಾಧಾರಕರಾಗಿ ಅನುಕರಿಸುವುದರಿಂದ ಅವರ ಮುಂದಿನ ದಾರಿಯು ಸುಖಕರವಾಗುತ್ತದೆ.

೧೬. ಜ್ಞಾನಸಾಗರದಿಂದ ಹುಟ್ಟಿದ ಅಲೆಗಳೇ ಕೃಷ್ಣ, ಬುದ್ಧ, ಕ್ರಿಸ್ತ, ಮುಹಮ್ಮದ, ಶಂಕರ, ಚಂದ್ರಗುಪ್ತ, ಅಶೋಕ, ಇವರೂ; ನೆಪೋಲಿಯನ್, ವಾಶಿಂಗ್ಟನ್, ಕಾರ್ಲ್‌ಮಾರ್ಕ್ಸ್, ಇಂಥ ರಾಜಕಾರಣಿಗಳೂ, ಎಡಿಸನ್, ನ್ಯೂಟನ್ ಇತ್ಯಾದಿ ವಿಜ್ಞಾನ ಶೋಧಕರೂ ಆಗಿದ್ದಾರೆ.

೧೭. ಶುದ್ಧಾಂತಃಕರಣದವರಿಗೆ ಎಲ್ಲವೂ ಶುದ್ಧವಾಗಿಯೇ ತೋರುವುದು.

೧೮. ಸಂಕೋಚವು ನಾಶಕ್ಕೆ ಕಾರಣ ವಿಕಾಸವಾದವು ಸುಖದಾಯಕವಾಗಿದೆ. ಸರ್ವತ್ರ ಆತ್ಮಭಾವ ಕಾಣುವುದರಿಂದ ಭೀತಿಯೇ ಇಲ್ಲದಂತಾಗುತ್ತದೆ.

೧೯. ಕ್ಷಣಕಾಲವಾದರೂ ವಿಲಂಬಿಸದೆ ತನ್ನ ದೋಷಗಳನ್ನು ತ್ಯಜಿಸಲು ಶಕ್ತಿ ಇಲ್ಲದವನು ಮುಕ್ತಿಯ ಅಧಿಕಾರಿಯಲ್ಲ; ಅವನು ಪ್ರಗತಿ ಹೊಂದಲಾರನು.

೨೦. ಇನ್ನೊಂದು ಲೋಕದ ಕಾಂಕ್ಷೆ ಇಡದೆ ಈ ಲೋಕದಲ್ಲಿಯೇ ಬಾಳಿ ಬದುಕಿ ಪುರುಷಾರ್ಥ ಗಳಿಸಿರಿ.

೨೧. ಉತ್ಕರ್ಷ ಹೊಂದಬೇಕಾದವರು ಸತತ ಕಾರ್ಯಾಸಕ್ತರಾಗಬೇಕು. ಆ ಗುಣವಿಲ್ಲದಿರುವ ಪ್ರಯತ್ನಹೀನ, ಅದೃಷ್ಟ ಮತ್ತು ದೈವವಾದಿಗಳು ಗುಲಾಮರೇ ಸರಿ. ಇದರ ನಿಜತ್ವದ ಉದಾಹರಣೆಯು ಪಾಶ್ಚಾತ್ಯರಿಂದ ತಿಳಿಯುವುದು. ಅವರ ಆ ಗುಣವನ್ನು ಅನುಕರಿಸುವವರು ಉತ್ಕರ್ಷ ಹೊಂದುವರು.

೨೨. ಸಂಸಾರದಲ್ಲಿ ಬರುವ ಮಹಾ ವಿಪತ್ತು-ಕಷ್ಟಗಳನ್ನು ಸಹಿಸಿ ಬುದ್ಧಿಯನ್ನು ಸ್ಥಿಮಿತದಲ್ಲಿರಿಸುವ ಯೋಗ್ಯತೆಯು ವೇದ—ಉಪನಿಷತ್ ಗ್ರಂಥವಾಚನ ಅಭ್ಯಾಸ ಆಚರಣೆಯಿಂದಲೇ ಸಾಧ್ಯ.

೨೩. ಮನುಷ್ಯತ್ವ ಹೊಂದಿದ ನೀವು ಮನುಷ್ಯರಾಗಿಯೇ ಬಾಳಿರಿ. ನಿದ್ದೆಯಿಂದ ಎಚ್ಚರವಾಗಿರಿ. ಆಲಸ್ಯ ತೊಲಗಿಸಿ ನಿಮ್ಮಲ್ಲಿರುವ ಗೂಢ ಆತ್ಮತೇಜಸ್ಸಿನಿಂದ ನಿಮ್ಮನ್ನು ನೀವು ಉದ್ಧರಿಸಿ ಲೋಕಕಲ್ಯಾಣ ಮಾಡುವವರಾಗಿರಿ.

೨೪. ವೈವಾಹಿಕ ಸ್ತ್ರೀ ಪುರುಷರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಉತ್ತಮ ಬ್ರಹ್ಮಚರ್ಯವ್ರತಸ್ಥರಾಗಿ ಶೀಲವಂತರಾಗಬೇಕು. ಆದರಿಂದ ಜನಾಂಗದ ಬಾಳುವೆ ಉತ್ತಮವಾಗುವುದು.

೨೫. ಸ್ವಾವಲಂಬನದ ಜೀವನ ಒದಗುವ ಶಿಕ್ಷಣ ಕೊಡುವ ವಿದ್ಯಾ ಪೀಠಗಳನ್ನು ಸ್ಥಾಪಿಸಿ, ಶಿಕ್ಷಣ ಕೊಡುವಂತಾಗಬೇಕು.

೨೬. ದೇಶ ಸ್ವಾತಂತ್ರ್ಯ, ರಕ್ಷಣೆ, ಆಳ್ವಿಕೆಯಲ್ಲಿ ಮತ-ಧರ್ಮಭೇದದ ಗೊಂದಲ ತರಬಾರದು ದೇಶ, ಸಾರ್ವಜನಿಕ ಕಾರ್ಯಗಳಿಗೆ ಪ್ರಥಮ ಸ್ಥಾನವಿರಬೇಕು; ಮತವು ವ್ಯಕ್ತಿ-ಸಮಾಜದ್ದಾದ ಕಾರಣ ಅದು ಎರಡನೇ ಸ್ಥಾನ ಹೊಂದುವುದು.

೨೭. ಹುಗಿದಿಟ್ಟ ಅಪರಂಜಿ ಚಿನ್ನ ಕೂಡ ನಿಸ್ತೇಜವಾಗಿಯೂ, ಅನುಪಯೋಗಿಯೂ ಆಗಿಹೋಗುವಂತೆ, ಸದ್ಗುಣಿಮನುಷ್ಯನು ಸತ್ಕಾರ್ಯ ಪ್ರವೃತ್ತನಾಗದಿರುವುದರಿಂದ ನಿಸ್ತೇಜನೂ ವ್ಯವಹಾರಶೂನ್ಯನೂ ಆಗುವನು. ಇವೆರಡೂ ಹೆಚ್ಚು ಹೆಚ್ಚು ಉಪಯೋಗಿಸುವುದರಿಂದಲೇ ಅದಕ್ಕೆ ತೇಜವೂ ವೃದ್ಧಿಯೂ ಉಂಟಾಗುವುದು.

೨೮. ಉದ್ಯೋಗದಲ್ಲಿ ಮೇಲು-ಕೀಳು ಎಂಬ ಭಾವ ಇರುವ ಸಮಾಜವು ಅಧೋಗತಿ ಹೊಂದುವುದು. ಕಲಾ ಕೈಗಾರಿಕೆಗಳಿಗೆ ಮಾನ್ಯತೆ ಕೊಡುವ ಸಮಾಜವು ಚೈತನ್ಯದಿಂದ ವೃದ್ಧಿ ಹೊಂದುವದು.

೨೯. ಷಡ್ವೈರಿಗಳ ನಿರೋಧವು ತೋರಿಕೆಗೆ ತಕ್ಕ ಇದ್ದರೆ, ಅವರ ನಾಶವಾಗುವುದು ಹೇಗೆ? ಅವುಗಳ ಮೂಲವು ಮನಸ್ಸಿನಲ್ಲಿದೆ; ಅದನ್ನೇ ಕಿತ್ತೊಗೆಯಬೇಕು. ಇದು,— ಸತ್ಸಹವಾಸ, ಸದ್ಗ್ರಂಥ ವಾಚನ, ಉಲ್ಲಾಸ ಚಿತ್ತಕ್ಕೆ ಪ್ರಯತ್ನ, ಸತ್ಕಾರ್ಯದಲ್ಲಿ ನಿರತನಾಗುವುದು=ಇದರಿಂದಲೇ ಸಾಧ್ಯ.

೩೦. ಪಡೆಯುವ ಅಥವಾ ಬೇಡುವುದಕ್ಕಿಂತ ಕೊಡುವುದರಲ್ಲಿ ಅಧಿಕ ಉಲ್ಲಾಸವಿದೆ.

೩೧. ದೇಶದಲ್ಲಿರುವ ಜನತಾ ಜನಾರ್ಧನನ—ದರಿದ್ರ ನಾರಾಯಣನ— ಪೂಜೆ ಮಾಡಿರಿ; ಅವರಿಗೆ ಜ್ಞಾನ ಕೊಡಿರಿ.

೩೨. ವಿದ್ಯಾ ಸಂಪನ್ನನೂ ಧನಸಂಪನ್ನನೂ ಸದಾ ಉದ್ಯೋಗಹೀನನಾಗಿರುವ ಬಾಳು ವ್ಯರ್ಥ. ದೇವರು ಕೊಟ್ಟ ದೇಹವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವುದೇ ಅದರ ಸಾರ್ಥಕತೆ.

೩೩. ನಿರುದ್ಯೋಗಿಯ (ಸೋಮಾರಿಯ) ಆಯುಷ್ಯವು ಬೆಲೆಯಿಲ್ಲದ್ದು; ಕ್ಷೀಣತ್ವ ಹೊಂದುವದು. ಕಾರ್ಯನಿರತನ ಆಯುಷ್ಯವು ಮೌಲ್ಯವುಳ್ಳದ್ದು; ಹೆಚ್ಚುವುದು.

೩೪. ಲೌಕಿಕ ವ್ಯವಹಾರದಲ್ಲಿ ಎಷ್ಟು ಉನ್ನತಿ ದೊರೆತರೂ ಆತ್ಮೋ ನ್ನತಿಯಾಗದೆ ಶಾಂತಿ ಇಲ್ಲ.

೫. ಸ್ವಾಮೀ ರಾಮತೀರ್ಥರ ವಚನಗಳು

೧. ಸಂಸಾರದಲ್ಲಿ ಬರುವ ಸುಖದುಃಖಗಳು ಮಾಯಾರೂಪಿ ಸುಖ ಸಂ ತ್ತಿನಿಂದ, ಕಾಮ—ಕ್ರೋಧ—ಲೋಭ—ಮದಗಳೆಂಬ ಬಂಡೆಕಲ್ಲು ಗಳನ್ನು ತೋರಿಸುವ ದೀಪಸ್ತಂಭಗಳಾಗಿವೆ.

೨. ಸುಖದುಃಖಗಳು ಮನುಷ್ಯನ ಪ್ರಗತಿಯ ದಾರಿಗಳು. ಅವು ಗಳನ್ನು ವಿವೇಕವೆಂಬ ಬೆಳಕಿನಿಂದ ನೋಡಿ ನಡೆಯುವವನು ಉತ್ತಮ ಗತಿಗೂ, ಅವಿವೇಕಿಯು ಅಂಧತ್ವರೂಢಿಗೆ ಬಲಿಯಾಗಿ ನೀಚಸ್ಥಿತಿಗೂ ಹೋಗುವರು. ದುಃಖದಿಂದ ವೈರಾಗ್ಯವೆಂಬ ಉತ್ತಮ ಪ್ರಗತಿಯ ಬೆಳಕು ಕಾಣುತ್ತದೆ.

೩. ಬುದ್ಧಿ ಮತ್ತು ಮನಸ್ಸಿನ ದೃಢತೆಯು ಆರೋಗ್ಯದಲ್ಲಿದೆ. ಆರೋಗ್ಯವು ಇಂದ್ರಿಯ ಸಂಯಮನ ಮತ್ತು ಮಿತ ಆಹಾರ ಹಾಗೂ ವ್ಯಾಯಾಮದಿಂದ ಸಿದ್ಧಿಸುತ್ತದೆ.

೪. ಮನಸ್ಸಿನಿಂದ ಕೂಡ ಯಾರು ಪಶುವೃತ್ತಿಯನ್ನು ತ್ಯಜಿಸಲು ಶಕ್ತನೋ ಅವನೇ ಮನುಷ್ಯನು.

೫. ಸುಖಪ್ರಾಪ್ತಿಯು ಬಾಹ್ಯ ಜಡದೇಹದಿಂದ ಲಭಿಸುವುದಿಲ್ಲ. ಅದು, ಅಂತರ್ಯತೃಪ್ತಿಯಿಂದಲೇ ಸಿದ್ಧಿಸುವುದು.

೬. ವಿಧ ವಿಧ ಬಣ್ಣಗಳ ಕನ್ನಡಿಗಳಿಂದ ಒಂದೇ ವಸ್ತುವು ಬಹು ಬಹು ಬಣ್ಣಗಳಿಂದ ಕಾಣುವಂತೆ ಬಹು ವಿಧ ದೇಹಧಾರಣೆ ಮಾಡಿದ ಜೀವಿ ಗಳು ಆತ್ಮ ಭೇದದಿಂದ ಕಾಣುತ್ತವೆ. ಶುದ್ಧ ಜ್ಞಾನದೃಷ್ಟಿಯ ಸ್ವಚ್ಛಕನ್ನಡಿ ಯಿಂದ ನೋಡುವವನಿಗೆ ಅದರ ಏಕರೂಪವೇ ಕಾಣುತ್ತದೆ.

೭. ಪ್ರಾಣಿಗಳಲ್ಲಿರುವ ಆತ್ಮವು ಜಗತ್ತಿನ ಸ್ವಾಮಿತ್ವವುಳ್ಳದ್ದು. ಆದುದರಿಂದ ಅಲ್ಪವಸ್ತುಗಳ ಸಂಗ್ರಹ ಬಿಟ್ಟು ಜಗತ್ತಿನ ಸ್ವಾಮಿತ್ವವನ್ನೇ ಹೊಂದುವ ಪ್ರಯತ್ನವಿಡಬೇಕು.

೮. ಮನುಷ್ಯನ ಬಾಳುವಿಕೆಯು ಪ್ರೇಮ, ಆಸೆ, ಆಸ್ತಿಕತೆ ಇವುಗಳ ಮೇಲೆ ಹೊಂದಿಕೊಂಡಿದೆ.

೯. ದುರ್ಜನರಿಂದಲೇ ಅವತಾರಪುರುಷರ ಹುಟ್ಟುವಿಕೆಯಾಗುತ್ತದೆ (ಕಾರಣವಾಗುತ್ತದೆ); ದುರ್ಬಲರಿಂದಲೇ ಶ್ರೀಮಂತಿಕೆಯ ಉತ್ಪತ್ತಿಯಾಗಿದೆ.

೧೦. ಹಣವಂತರ ಬೆಲೆಯನ್ನು ಹಣದ ಸಂಖ್ಯೆಯಿಂದಲೇ ನಿರ್ಣಯಿಸಲಿಕ್ಕೆ ಬರುತ್ತದೆ. ಗುಣವಂತ ಮಹಾತ್ಮರ ಬೆಲೆಯು ಸತ್ಯ, ನಿಶ್ಚಲ ಮನಸ್ಸು, ಪ್ರೇಮ, ವಿಶ್ವಬಂಧುತ್ವ, ಕಾರ್ಯತತ್ಪರತೆ—ಇವುಗಳಿಂದಲೇ ತಿಳಿಯಬೇಕು; ಇದು ಸಂಖ್ಯೆಗೆ ಅತೀತವಾಗಿದೆ.

೧೧. ಮಾತು ಕಡಿಮೆಯಿರುವವನಿಂದಲೇ ಕಾರ್ಯವಾಗುವುದು ಹೆಚ್ಚು.

೧೨. ಕೋಟಿಗಟ್ಟಲೆ ದ್ರವ್ಯವನ್ನು ವ್ಯಯಿಸಿ ರಚಿಸಿದ ಪ್ರಾಸಾದಗಳು ಉತ್ಪಾತ (ಭೂಕಂಪ)ದ ಮುಂದೆ ಬೆಲೆಯಿಲ್ಲದವುಗಳು. ಆದರಂತೇ, ನಿನ್ನ ಅಹಂಭಾವವು ಸೃಷ್ಟಿಯ ನಿಯಮದ ಮುಂದೆ ತುಚ್ಛ.

೧೩. ಧರ್ಮ ಮತ್ತು ದಾನಕೊಡುವುದು ಉಪಕಾರಕ್ಕೆ ಮತ್ತು ಅನ್ಯರ ಹಿತಕ್ಕಾಗಿರದೆ, ತನ್ನನ್ನೇ ಸತ್ಕರ್ಮಿಯಾಗಿ ಮಾಡುವ ಅಭ್ಯಾಸಕ್ಕಾಗಿ ಎಂದೆಣಿಸಬೇಕು. ಆ ಸಂದರ್ಭ ಒದಗಿ ಬರುವುದು ಶ್ರೇಯಸ್ಸು ಎಂತ ಭಾವಿಸು. ನೀನು ಕೊಡದೇ ಇರುವುದರಿಂದ ಜೀವನವು ತಡೆಯಲ್ಪಡುವುದಿಲ್ಲ.

೧೪. ಗತ ಇತಿಹಾಸವು ವಾಚನಕ್ಕೆ ಉತ್ತಮ. ಭಾವೀ ಇತಿಹಾಸವನ್ನು ಉಂಟುಮಾಡುವುದು ಉಲ್ಲಾಸಕರ.

೧೫. ಕುಟುಂಬಕ್ಕೋಸ್ಕರ ಒಂದು ವ್ಯಕ್ತಿಯನ್ನು, ಸಮಾಜಕ್ಕೋಸ್ಕರ ಒಂದು ಕುಟುಂಬವನ್ನು, ದೇಶಕ್ಕೋಸ್ಕರ ಒಂದು ಸಮಾಜವನ್ನು, ಸ್ವಾತಂತ್ರ್ಯಕ್ಕೋಸ್ಕರ ಒಂದು ದೇಶವನ್ನು—ತ್ಯಾಗಮಾಡಬಹುದು. ಆತ್ಮಾರ್ಪಣ ಮಾಡುವ ಗುಣವು ಸರ್ವೋತ್ಕೃಷ್ಟವೂ ಶ್ಲಾಘನೀಯವೂ ಆಗಿದೆ.

೧೬. ಪ್ರತಿ ಜೀವಿಯು ಸೃಷ್ಟಿಸಲ್ಪಡುವ ಮೊದಲೇ ಸೃಷ್ಟಿಕರ್ತನಿಂದ ಅದರ ಜೀವಿತಭಂಡಾರವು ಸೃಷ್ಟಿಸಲ್ಪಟ್ಟು ಪ್ರಾಣಿಗಳ ಉಪಯೋಗಕ್ಕೆ ಕೊಡಲ್ಪಟ್ಟಿದೆ. ಬುದ್ಧಿಜೀವಿಯಾದ ಸ್ವಾರ್ಥಿ ಮನುಷ್ಯನು ಸಂಕುಚಿತ ದೃಷ್ಟಿಯಿಂದಲೂ ವಿಷಮ ವಿತರಣದಿಂದಲೂ ನರಕಸಮಾನಮಾಡಿದ್ದಾನೆ.

೧೭. ಪ್ರಾರಬ್ಧ, ಅದೃಷ್ಟ ಎಂಬ ಹುಚ್ಚುನಂಬಿಕೆಯೇ ಮನುಷ್ಯನನ್ನು ಕರ್ತವ್ಯಹೀನನನ್ನಾಗಿ ಮಾಡುತ್ತದೆ.

೧೮. ವ್ಯಕ್ತಿನಿಷ್ಠನಾಗುವುದಕ್ಕಿಂತ ತತ್ತ್ವನಿಷ್ಠನಾಗುವವನೇ ಜ್ಞಾನಿಯಾಗಿದ್ದಾನೆ.

೧೯. ಆಸಕ್ತಿ (ಆಶೆ, ಆತ್ಯಾಶೆ)ಯಿಂದ ಸಂಸಾರವನ್ನು ದುಃಖಮಯವಾಗಿಯೂ, ಅನಾಸಕ್ತಿಯಿಂದ ಆನಂದಮಯವಾಗಿಯೂ ಮಾಡಬಹುದು.

೨೦. ಲೋಕದಲ್ಲಿ ಮಹದೈಶ್ವರ್ಯವಂತರೆಂಬವರಷ್ಟು ದರಿದ್ರರು ಕಡುಭಿಕ್ಷುಕರಲ್ಲ. ಮಹದೈಶ್ವರ್ಯವಂತರಲ್ಲಿರುವ ದುರ್ವರ್ತನೆಯೂ ಲೋಭತ್ವವೂ ಕಡುದರಿದ್ರರಲ್ಲಿಲ್ಲ.

೨೧. ಯೌವನದಲ್ಲಿ ಜ್ಞಾನಸಂಗ್ರಹ ಮಾಡದ ಮನುಷ್ಯನು ಮುಪ್ಪಿನಲ್ಲಿ ಬಾಲಬುದ್ಧಿಯವನಾಗುವನು. ಜ್ಞಾನಧನವನ್ನು ಯೌವನದಲ್ಲಿ ಸಂಗ್ರಹಿಸಿ, ವೃದ್ಧಾಪ್ಯದಲ್ಲಿ ಸದ್ವಿನಿಯೋಗದಿಂದ ಶಾಂತಿಸುಖಗಳನ್ನು ಹೊಂದಬಹುದು.

೨೨. ಸತ್ಯಭಾಷಣ ಮತ್ತು ಆಚರಣೆಯು ಜನರ ಅಪ್ರೀತಿಗೆ ಕಾರಣವಾಗಿದೆ. ಆದರೆ, ಅದರಿಂದ ದೂರವಾಗುವುದು ದುರ್ಗತಿಯಾಗಿದೆ.

೨೩. 'ದೇವರು' 'ದೇವರು' ಎಂಬ ಜಪದಿಂದ ಧಾನ್ಯ ಬೆಳೆಯುವುದಿಲ್ಲ; ದ್ರವ್ಯವು ದೊರೆವುದಿಲ್ಲ; ಹಸಿವು ತಣಿಯುವುದಿಲ್ಲ. ಕಾಯಕಷ್ಟದಿಂದಲೇ, ಜೀವನದ ನಿಜವಾದ ಬಂಡವಾಳ. ದುಡಿಯುವುದರಿಂದಲೇ ಜೀವನಸೌಕರ್ಯವೊದಗುವುದು.

೨೪. ಕಷ್ಟಕೃತದಿಂದ ಸಂಗ್ರಹಿಸಿದ ದ್ರವ್ಯವು ಬಂಡವಾಳಗಾರರ ಪೆಟ್ಟಿಗೆಗಳನ್ನು ತುಂಬಿಸುವುದಕ್ಕಾಗಿರದೆ ಬಹುಜನರ ಜೀವಿತದ ಸೌಕರ್ಯ ಹೆಚ್ಚಿಸುವುದಕ್ಕಾಗಿರಲಿ.

೨೫. ತರುಣ ಭಾರತೀಯರನ್ನು ಸ್ವಾವಲಂಬನ ಜೀವನ ಕೊಡದಿರುವ ವಿದ್ಯೆಗೆ ಬಿಗಿಯುವುದೆಂದರೆ ಮೃತ್ಯುಶಯ್ಯೆಯಲ್ಲಿರುವವನಿಗೆ ಮದುವೆ ಮಾಡುವ ಹಾಗಿದೆ.

೨೬. ನಿರ್ಜನವಾದ ಬಂಗಾರ-ವಜ್ರಗಳ ಗಣಿಗಳನ್ನು ನಂಬಬೇಡ. ಕೆಲಸಕ್ಕೆ ಬರುವ ಕಬ್ಬಿಣ—ಕಲ್ಲಿದ್ದಲು ಮುಂತಾದುವು ಲೋಕೋಪಕಾರಕ್ಕೆ ಒದಗುವಂತೆ ಕಷ್ಟಜೀವಿಗಳೇ ಲೋಕೋಪಕಾರ ಜೀವಿಗಳು.

೨೭. ಯೋಗಿಗೆ ಸಂಸಾರವು ಸುಖದಾಯಕವಾಗಿಯೂ ಭೋಗಿಗೆ ದುಃಖದಾಯಕವಾಗಿಯೂ ಭಾಸವಾಗುತ್ತದೆ. ಯೋಗಿಯು ಸಂಸಾರದ

ರಹಸ್ಯ ತಿಳಿದು ಎಚ್ಚರವಿರುವವನು. ಭೋಗಿಯು ಅನಿತ್ಯ ವಸ್ತುಸಂಗ್ರಹದ ಭ್ರಮೆಯಿಂದ ಆಯುವರ್ಜನ ಮರೆತು ದುಃಖಗಳಿಂದ ಮೋಸಹೊಂದುತ್ತಾನೆ.

೨೮. ಸಹಸ್ರಸಂಖ್ಯೆ ಅಜ್ಞಾನಿಗಳ ಬಹುಮತ ಮತ್ತು ಸಹಾಯಕ್ಕಿಂತ ಒಬ್ಬ ಜ್ಞಾನಿಯ ಸಹವಾಸವೂ ಸ್ನೇಹವೂ ಉತ್ತಮವಾಗಿದೆ.

೨೯. ನಿನ್ನ ಆರಂಭವೂ ಅಂತ್ಯವೂ ತಿಳಿಯದ ನೀನು ಮಧ್ಯಕಾಲದ ಅಲ್ಪಸಮಯದ ನಿನ್ನ ಬಾಳುವಿಕೆಗಾಗಿ ಅಹಂಭಾವಪಡಬೇಡ.

* * * * * * * * *

೬. ಮಹಾತ್ಮಾಜಿಯವರ ವಚನಗಳು

೧. ಕಷ್ಟದ ಜ್ವಾಲೆಯಿಂದ ಬೇಯದ ಮನಸ್ಸು ಉನ್ನತಿಹೊಂದಲಾರದು.

೨. ಉತ್ಪನ್ನ ಮಾಡದವನಿಗೆ ವ್ಯಯಮಾಡುವ ಅಧಿಕಾರವಿಲ್ಲ.

೩. ಮಿತ ಆಹಾರಿ, ಮಿತ ಭೋಗಿ, ಮಿತ ವ್ಯಯಿಯೇ ಸುಖಿಯು.

೪. ಕಷ್ಟಾನುಭವದಿಂದಲೇ ಒಬ್ಬನು ಪ್ರಗತಿಹೊಂದಬಲ್ಲನು.

೫. ಕ್ಷಮಾಗುಣವಿರುವುದರಿಂದಲೇ ಮನುಷ್ಯನಾಗಬಹುದು.

೬. ದುಂದುವ್ಯಯವು ಶುಭಾಶುಭ ಕಾರ್ಯಗಳಲ್ಲಿ ಕೂಡ ಅಕ್ಷಮ್ಯ ಪಾಪವಾಗಿದೆ.

೭. ಉಪವಾಸವು ದೇಹ ಮತ್ತು ಅಂತಃಶುದ್ಧಿಗೆ ಸಹಕಾರಿ.

೮. ಮಿತ್ರ-ಶತ್ರು ಭೇದ ಅಳಿಯುವುದೇ ಜ್ಞಾನದ ಪರಮಾವಧಿ.

೯. ದುಡಿಯದೇ ತಿನ್ನುವುದು ಕಳ್ಳತನ ಮತ್ತು ಹೇಡಿತನ.

೧೦. ಅಲಂಕಾರ ವೇಷಭೂಷಣಗಳು ಅಹಂಭಾವವುಂಟುಮಾಡುತ್ತವೆ.

೧೧. ಅಂತ್ಯದ ಶ್ವಾಸವಿರುವ ತನಕ ಸರಸ್ವತಿ-ಲಕ್ಷ್ಮಿಯರ ಉಪಾಸನೆ ಬಿಡಬೇಡ.

೧೨. ಬಡತನದ ದುಃಖ, ದೇಹ ಮತ್ತು ಮನಸ್ಸಿನ ಯಾತನೆ—ಇವುಗಳ ನಿವಾರಣೆಯು ಉತ್ತಮ ಗ್ರಂಥವಾಚನದಿಂದ ಸಿದ್ಧಿಸುವುದು.

೧೩. ಅನುಭವವು ಜ್ಞಾನಕ್ಕೆ ಅಸ್ತಿವಾರ.

೧೪. ಧನಸ್ಥಿತಿಯು ತೃಪ್ತಿಕರವಿದ್ದಾಗ, ತನ್ನವರು ಶ್ಲಾಘಿಸಿದರೆ ಹಿಗ್ಗದಿರುವವನೇ ಜಾಣ.

೧೫. ಪ್ರಯತ್ನವೇ ಅದೃಷ್ಟವನ್ನು ಸಮೀಪಿಸುವ ಕುಶಲತೆ.

೧೬. ತನ್ನ ಸದಸದ್ವಿವೇಕ ಬುದ್ಧಿ, ಸಮತ್ವವಿರುವ ಬುದ್ಧಿ— ಇವುಗಳೇ ತನ್ನ ಗುರುವಾಗಿ ಭಾವಿಸು.

೧೭. ಉದಾತ್ತ ಆಲೋಚನೆ, ಅಭ್ಯಾಸ ವ ಪ್ರಯತ್ನಶೀಲನಿಗೆ ದೇವರ ಸಹಾಯವು ಸಿಗುವುದು.

೧೮. ಜೀವಿಸುವುದು ಮತ್ತು ಮರಣಹೊಂದುವದು ದೇಶಸೇವೆಗಾಗಿಯೇ ಇರಲಿ.

೧೯. ಬಾಘಜಾರಿಕೆ ತಿಳಿದವನು, ಸತತ ಹರಿದುಬರುವ ನೀರಿನ ಬುಗ್ಗೆಯನ್ನು ಕೆಡಿಸಲಾರನು.

೨೦. ದುಃಖಾಶ್ರುವಿನಿಂದ ಕಣ್ಣಿನ ಕೊಳೆ ತೊಳೆದವನಿಗೆ ಸತ್ಯ ಸೃಷ್ಟಿಯು ತಿಳಿಯಬಲ್ಲದು. ಮದಾಂಧನ ಮಲಿನ ದೃಷ್ಟಿಯು ಇದನ್ನು ತಿಳಿಯಲಾರದು.

೨೧. ಸದ್ಗುಣ ಸಂಪಾದನೆಗೆ ಪಡುವ ಶ್ರಮಕ್ಕಿಂತ ತುಸು ಹೆಚ್ಚು ಪ್ರಯತ್ನವು ದುರ್ಗುಣ ನೀಗುವುದಕ್ಕೂ ಅಗತ್ಯವಿದೆ.

೨೨. ಹಸಿವೂ ಮಾತೂ ಮಿತಿಯಿಂದಿರಬೇಕು.

೨೩. ಸತ್ಯವೇ ಧರ್ಮ, ಧರ್ಮವೇ ಸತ್ಯ. ಅದು ಕೆಲಕಾಲ ಲುಪ್ತವಾಗಿ ತೋರಿದರೂ ಮುಂದೆ ಅದೇ ಜಯಶೀಲವಾಗುವುದು.

೨೪. ಇತರರ ಸೌಖ್ಯವನ್ನು ಕೆಡಿಸುವುದಕ್ಕಿಂತ ದುಷ್ಕೃತ್ಯವು ಮತ್ತೊಂದಿಲ್ಲ.

೨೫ ಬೀದಿ ಕೂಸು ಬೆಳೆಯಿತು, ಕೋಣೆ ಕೂಸು ಕೊಳೆಯಿತು. ಬಯಲು ಹವೆಯೇ ಉತ್ತಮ.

೨೬. ಆರೋಗ್ಯದ ವಿಷಯವಾಗಿ ಕೆಲವು ಸೂಚನೆಗಳು: ೧. ದಿನದಲ್ಲಿ ಎಂಟು ಗಂಟೆಯ ನಿದ್ರೆ. ೨. ಐದಾರು ಕುಡುತೆಗಳಿಗೆ ಕಡಿಮೆಯಾಗದಷ್ಟು ದ್ರಾವಕಪದಾರ್ಥ ಸೇವನ. ೩. ತಿನ್ನುವ ಆಹಾರವನ್ನು ಸ್ವಾದದಿಂದ ನಿಧಾನವಾಗಿ ಜಗಿದು ತಿನ್ನುವುದು. ೪. ಬಯಲು ಪ್ರದೇಶದಲ್ಲಿ ಸಾಕಾಗುವಷ್ಟು ವ್ಯಾಯಾಮ. ೫. ಅವಸರದ ಆಲೋಚನೆಗೆ ಎಡೆಕೊಡದಿರುವುದು.

ಪ್ರತಿಯೊಂದು ವಿಷಯದಲ್ಲಿ ಶಾಂತತೆ, ಸಮಾಧಾನ. ೬. ಮಿತ ಆಹಾರ; ಖಾರ ವರ್ಜ್ಯ ಅಥವಾ ಅತಿ ಕಡಿಮೆ ಖಾರ. ೭. ತಣ್ಣೀರು ಸ್ನಾನ.

೨೭. **ಗೃಹದೊಳಗೆ (ಮನೆವಾರ್ತೆ):** ೧. ಸದ್ಗ್ರಂಥ ವಾಚನ. ೨. ಆದಾಯಕ್ಕೆ ತಕ್ಕ ಖರ್ಚು ಮಾಡುವುದು; ಪ್ರತಿಯೊಂದು ಆಣೆಯನ್ನು ವ್ಯಯಿಸುವಾಗ, ಈ ಖರ್ಚು ಅವಶ್ಯವೇ ಎಂದಾಲೋಚಿಸತಕ್ಕದ್ದು. ೩. ಸ್ವಾವಲಂಬನ ತತ್ತ್ವವನ್ನು ಹಿರಿಯರಾದವರು ಆಚರಿಸಿ, ಚಿಕ್ಕವರಿಗೂ ಕಲಿಸುತ್ತಿರುವುದು. ೪. ಯಾವ ಸಣ್ಣ ದೊಡ್ಡ ವಸ್ತುವನ್ನು ಸಂಗ್ರಹಿಸುವಾಗಲೂ, ಅದರ ಆವಶ್ಯಕತೆ, ಗುಣ, ಬಾಳ್ವಿಕೆಗಳನ್ನು ಚೆನ್ನಾಗಿ ಗೊತ್ತು ಮಾಡಿಕೊಂಡೇ ಪಡೆಯುವುದು. ೬. ಕುಟುಂಬದ ಪ್ರತಿಯೋರ್ವನೂ ಸೌಮ್ಯ ಹಾಗೂ ಸಾದಾ ಉಡುಪುಗಳನ್ನು ಧರಿಸುವುದು. ೭. ಮಿತಕರ, ಹಿತಕರ ಪಥ್ಯ. ೮. ಯಾವ ವಸ್ತುವೂ ಅಜಾಗ್ರತೆಯಿಂದ ವ್ಯರ್ಥವಾಗದಂತೆ ನೋಡಿಕೊಳ್ಳುವುದು.

೨೮. ಶತ್ರುಗಳ ಸಂಖ್ಯೆಯನ್ನು ಹೆಚ್ಚಿಸುವುದು ಸುಲಭ; ಸ್ನೇಹಿತರನ್ನು ದೊರಕಿಸಿಕೊಳ್ಳುವುದು ಕಷ್ಟತರ.

೨೯. ಬಡತನದಿಂದಾಗಲಿ ಸಾದಾ ಬಟ್ಟೆಗಳನ್ನು ಧರಿಸುವುದರಿಂದಾಗಲೀ ಅವಮಾನವಿಲ್ಲ. ದುರ್ನಡತೆಯೇ ಹೀನತನವೆನಿಸುವುದು.

■■■■■■■■

೭. ಉಪನಿಷತ್ತುಗಳಿಂದ

೧. ಜ್ಞಾನ ಮತ್ತು ಕರ್ಮ ಇವುಗಳ ಸಮತ್ವರೂಪವೇ ಯೋಗ. ಕರ್ಮವು ಜ್ಞಾನಯುಕ್ತವಾಗಬೇಕು. ಕೇವಲ ಜ್ಞಾನದಿಂದಾಗಲಿ ಕರ್ಮದಿಂದಾಗಲೀ ಸಿದ್ಧಿಯಿಲ್ಲ. ಎರಡೂ ಕೂಡಿದ ಸಮತ್ವವಿರಬೇಕು. ಎಲ್ಲ ಜೀವಿಗಳಲ್ಲಿ ತನ್ನನ್ನೂ, ತನ್ನಲ್ಲಿ ಎಲ್ಲ ಜೀವಿಗಳನ್ನೂ ಕಾಣುವವನು ದ್ವೇಷಾಸೂಯೆಗಳನ್ನು ತಾಳನು. (ಈಶ ಉಪನಿಷತ್ತು.)

೨. ಆತ್ಮದ ಅಸ್ತಿತ್ವವು ಪ್ರೇಮದಿಂದ ಸಿದ್ಧಿಸುತ್ತದೆ. ಪ್ರೇಮ ಮಾಡುವುದು ಆತ್ಮಕ್ಕೆ ಆಗಿರುತ್ತದೆ, ಬಾಹ್ಯವಸ್ತುವಿಗಲ್ಲ. ಪ್ರೇಮವು ಆತ್ಮದ ಗುಣವಾಗಿದೆ. ಅದು ಸೃಷ್ಟಿಯ ಜೀವಿತವೂ ಆಧಾರವೂ ಆಗಿದೆ. (ಬೃಹದಾರಣ್ಯಕೋಪನಿಷತ್ತು.)

■■■■■■■■

೮. ವಾಶಿಂಗ್ಟನ್

೧. ಇತರರ ಉಪಯೋಗಕ್ಕೂ ಸುಖಕ್ಕೂ ಯಾರು ಪ್ರಯತ್ನಪಡುತ್ತಾರೋ ಅವರು ಭಾಗ್ಯವಂತರು.

೨. ಅಲ್ಪರು ಸ್ವಾರ್ಥಕ್ಕಾಗಿಯೇ ಜೀವಿಸುತ್ತಾರೆ. ಒಳ್ಳೇ ಗ್ರಂಥಗಳ ಅಧ್ಯಯನಮಾಡುವುದಿಲ್ಲ; ಊರುಬಿಟ್ಟು ಕದಲುವುದಿಲ್ಲ. ಒಳ್ಳೆಯವರ ಸಹವಾಸವಿಲ್ಲ. ವರ್ಣದ್ವೇಷದಿಂದ ಸಂಕುಚಿತ ಮನಸ್ಸಿನವರಾಗುತ್ತಾರೆ.

೩. ಜಗತ್ತು ಪ್ರಗತಿಯನ್ನಾಶಿಸುತ್ತದೆ, ಅವಲಂಬಿಸುತ್ತದೆ. ಅದಕ್ಕೆ ಜಾತಿ, ವರ್ಣ, ಧರ್ಮಭೇದ ಅಥವಾ ಹಳೇ ಸಂಪ್ರದಾಯ—ರೂಢಿಗಳ ಮೇರೆಗಳಿಲ್ಲ.

....

೯. ಮಹರ್ಷಿ ಅರವಿಂದರು

೧. ಆಲಸ್ಯ, ಜಡತ್ವ, ತಾಮಸಗುಣಗಳಿಂದ ಆದಷ್ಟು ಹಾನಿಯು ಮಹಾಯುದ್ಧ, ಭೂಕಂಪಗಳು ಮತ್ತು ಮಹಾರೋಗಗಳಿಂದ ಆಗಿಲ್ಲ.

೨. ವ್ಯಾಪಾರವೂ ಯುದ್ಧಪ್ರವೃತ್ತಿಯೂ ಬೇರೆ-ಬೇರೆಯಲ್ಲ. ಅದು ಒಂದು ಇನ್ನೊಂದಕ್ಕೆ ಪೂರಕವಾಗಿದೆ. ಅದು, ಮಹಾಯುದ್ಧಗಳಿಂದ ತಿಳಿಯುತ್ತದೆ.

....

೧೦. ತುಕಾರಾಮ

೧. ಮನುಷ್ಯದೇಹವು ದೇವಮಂದಿರವಾಗಿದೆ. ಅದನ್ನು ದುರ್ಗುಣಗಳಿಂದ ಕೆಡಿಸುವಷ್ಟು ಮೂರ್ಖತ್ವ ಬೇರೊಂದಿಲ್ಲ.

೨. ಪ್ರತಿಯೊಬ್ಬನಿಗೂ ತನಗೆ ಮರಣವಿದೆಯೆಂದು ತಿಳಿದಿದ್ದರೂ, ಮರಣವೇ ಇಲ್ಲದಂತೆ ನಡಕೊಳ್ಳುತ್ತಿರುವುದು ಆಶ್ಚರ್ಯ.

ವಿ. ಸೂ:—'ಬಂದಾಣೆ ಮಾಲೆ' ಪುಸ್ತಕಗಳನ್ನು ಕೊಂಡುಕೊಂಡ ಕೂಡಲೇ ಸರಿಗೆ ತೆಗೆದುಹಾಕಿ, ದಾರದಿಂದ ಹೊಲಿದು ಇಟ್ಟುಕೊಳ್ಳಿ.

ತಾ. **8--3--1956**ರಲ್ಲಿ ಆರಂಭವಾಗಿದೆ!
ಪ್ರತೀ ದಿನ ಸಾಯಂಕಾಲ 6ರಿಂದ!!

ಕೊಡ್ಲಮೊಗರು ವಾಣೀ ವಿಜಯ ವಿದ್ಯಾ ಸಂಘದ
ಹೈಸ್ಕೂಲ್ ಕಟ್ಟಡದ ನಿಧಿಯ ಸಹಾಯಾರ್ಥ

ವಿವಿಧ ವಿನೋದಾವಳಿಗಳು

ಮಂಗಳೂರು, ಅಳಕೆಯ ಬಯಲಲ್ಲಿ.

ನರ್ತನಗಳು ★ ಸರ್ಕಸ್
ಸಂಗೀತ ಐಂದ್ರಜಾಲ ಇತ್ಯಾದಿ

ಪ್ರವೇಶ ಧನ: ಎರಡಾಣೆ ಮಾತ್ರ (0--2--0)

★

ತಾ. **24--3--1956**ನೇ ಶನಿವಾರ ರಾತ್ರೆ **9-30**ಕ್ಕೆ
ಮತ್ತು
ತಾ. **25--3--1956**ನೇ ರವಿವಾರ ಸಾಯಂಕಾಲ **6**ಕ್ಕೆ
ಕೇರಳ ಸೋದರಿಯರ ನೃತ್ಯ ಪ್ರದರ್ಶನಗಳಿವೆ.

Edited, Printed & Published by K. V. Shenoy
at The Prabhat Printers, Ltd., Mangalore.